**ಮೂರನೆ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ನ್ಯಾಯಾಲಯ ಕನಕಪುರ**

**ಸಿ.ಸಿ.ನಂಃ 1953/2021**

ಪಿರ್ಯಾದಿ : ಶ್ರೀ ಪುಟ್ಟಸ್ವಾಮಿ

– ವಿರುದ್ಧ –

ಆರೋಪಿ : ಶ್ರೀಮತಿ ಭಾಗ್ಯ ಸಿ.ಪಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ**

ಪ್ರಶ್ನೆ–1: ಈ ಪ್ರಕರಣದಲ್ಲಿಯ ಸಾಕ್ಷಿ ಹೇಳಿರುವ ಸಾಕ್ಷ್ಯವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ–2: ಫ್ರಾಸಾ–1 ಶ್ರೀ ಪುಟ್ಟಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯವುದೇನೆಂದರೆ, ಆರೋಪಿಯಾದ ನೀವು ಫ್ರಾಸಾ–1 ರವರಿಗೆ ಸುಮಾರು 15 ವರ್ಷಗಳಿಂದ ಪರಿಚಯವಿದ್ದು, ನಿಮ್ಮ ಹಣಕಾಸಿನ ಅವಶ್ಯಕತೆಗಾಗಿ ಫ್ರಾಸಾ.1 ರವರನ್ನು ಭೇಟಿಯಾಗಿ ರೂ. 7,00,000/– ಗಳ ಹಣಕಾಸಿನ ಸಹಾಯವನ್ನು ಕೋರಿದ್ದು ಮತ್ತು ಆ ಪ್ರಕಾರ ರೂ. 7,00,000/– ಗಳನ್ನು ಪಡೆದುಕೊಂಡು, ಸದರಿ ಹಣದ ಪಾವತಿಗಾಗಿ ದಿನಾಂಕಃ 10.01.2021 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ , ಕನಕಪುರ ಶಾಖೆಯ ಎರಡು ಚೆಕ್ ಗಳನ್ನು ನೀಡಿದ್ದು, ಚೆಕ್ ನಂ. 063647 ನೇದನ್ನು ರೂ.4,00,000/– ಮತ್ತು ಚೆಕ್ ನಂ. 063648 ನೇದ್ದನ್ನು ರೂ.3,00,000/–ಗಳಿಗೆ ಫ್ರಾಸಾ.1 ರವರಿಗೆ ನೀಡಿರುತ್ತೀರಿ ಎಂದು ಸಾಕ್ಷ್ಯನುಡಿಯುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ–3: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ.1 ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕನಕಪುರ ಶಾಖೆ ಇವರಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದು, ಸದರಿ ಚೆಕ್ಕು ದಿನಾಂಕಃ 19.01.2021 ರಂದು ನಗದೀಕರಣವಾಗದೇ (**Funds Insufficient**) ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡಿದ್ದು, ಈ ಬಗ್ಗೆ ನಿಮಗೆ ವಕೀಲರ ಮುಖಾಂತರ ದಿನಾಂಕಃ 06.02.2021 ರಂದು ನೋಟಿಸನ್ನು ಕಳಿಸಿದ್ದು, ಸದರಿ ನೋಟಿಸ್ ನ್ನು ತೆಗೆದುಕೊಂಡು ಹಣವನ್ನು ವಾಪಸ್ಸು

ಮಾಡದೇ, ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿಯುತ್ತಾರೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ–4: ನಿಮಗೆ ಏನಾದರೂ ಹೇಳುವುದು ಇದೆಯಾ?

ಉತ್ತರ :

ಪ್ರಶ್ನೆ–5: ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುತ್ತೀರಾ?

ಉತ್ತರ :

(ಮೇಲೆ ಹೇಳಿದ ಹೇಳಿಕೆಗಳನ್ನು ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

Sd/–

ಸ್ಥಳಃ ಕನಕಪುರ
ದಿನಾಂಕಃ 22.11.2025

(ರವಿಪ್ರಕಾಶ್ ಟಿ .ಆವಿನ್)
ಮೂರನೇ ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ. ಕನಕಪುರ.

ಆರೋಪಿ ಸಹಿ: